ಸಾವಿನದೇ ಸಾರಿಗೆ ಅದು! ಹುಟ್ಟುವಾಗಲೇ, ಒಳಗೆ ಸಾವು ತೊಟ್ಟುಟ್ಟುಕೊಂಡಿರುವ ಮೈಯ ಕುರಿತಾಗಿ ಇನ್ನೇನನ್ನುವುದು? ಒಂದರ್ಥದಲ್ಲಿ ಸಾವಿನದೇ ಸಂಗೋಪನೆಯಲ್ಲವೆ ಶಾರೀರಿಕ ವ್ಯಾಪಾರ?

ಎಂತಲೇ, ಕನಕದುರ್ಗೆ ಹೆಂಡತಿಯಾಗಿ, ಸಖಿಯಾಗಿ, ವಿಧಿಯೊಡ ಮಾಡಿಕೊಟ್ಟ ಕನ್ನೆಯಾಗಿ, ಮನೋದೇವತೆಯಾಗಿ, ನನಗೆಷ್ಟೇ ಆಪ್ತಳಾದರೂ, ದಿನದಿನವೂ ಎಂದು ತೇಲಿಹೋದಾಳೆಂದು ಕಾಯುತ್ತಿರುವುದಾಗಿದೆ. ಪರಮಾಪ್ತೇಷ್ಟ ಮಂದಿಯ ಸಾವೆದುರು ನೋಡಿಕೊಂಡಿರುವ ಕರ್ಮವೇನೆಂದು, ಖುದ್ದು ತಿಳಿದವರಿಗಷ್ಟೇ ಗೊತ್ತು!

ಅಮ್ಮನ ಈ ಪರಿ ವಿಪರೀತ ಕುರಿತು ತಿಳಿಯಪಟ್ಟರೂ ಹೃಷಿಗೆ ಹೆಚ್ಚೇನೂ ಕಳವಳವಾಗಲಿಲ್ಲ. ಪರಿತಪಿಸಲೂ ಇಲ್ಲ. ಸುಮ್ಮಗೊಮ್ಮೆ ಬಂದ ಶಾಸ್ತ್ರ ಮಾಡಿ, ಎರಡೇ ಎರಡು ದಿವಸವಿದ್ದು ಹೊರಟುಬಿಟ್ಟ. ಹೊರಡುವ ಮುನ್ನ ಅಮ್ಮನೆದುರು ಎರಡು ನಿಮಿಷವಿದ್ದು, ಕಣ್ಣುಮುಚ್ಚಿ ಏನನ್ನೋ ಧ್ಯಾನಿಸಿದ. ಮನಸ್ಸು ತಿಳಿಯದ ಅವಳ ಮೈಯನ್ನು ಪಾರ್ಥಿವವೆಂತಲೇ ಬಗೆದನೋ, ಹೇಗೆ? ಒಟ್ಟಾರೆ ಶ್ರದ್ಧಾಂಜಲಿಸಭೆಯಲ್ಲಿ ಮೃತರ ಗೌರವಾರ್ಥ ಎದ್ದು ನಿಂತು ನಿಮಿಷದ ಮೌನವಾಚರಿಸುತ್ತಾರಲ್ಲ, ಹಾಗೆ, ಇದ್ದುಬಿಟ್ಟ. ವಾಪಸಾದ ಮೇಲೆ ಒಂದಾದರೂ ಈ–ಮೇಲು ಬೇಡವೆ? ಫೋನು ಬೇಡವೆ? ಅತ್ತಕಡೆಯಿಂದ ಚಕಾರ ಕೂಡ ಕೇಳಿಬರಲಿಲ್ಲ.

ಇನ್ನು 'ಸೀತಾನದಿ'ಯಲ್ಲಿನ ನನ್ನ ಬದುಕಂತೂ, ಹೆಂಡತಿಯೊಡನಿದ್ದೂ, ಏಕಾಂತದಲ್ಲೇರ್ಪಟ್ಟಿತು. ಘನಘೋರವಾಗಿ ಒಂಟಿಯೆನಿಸತೊಡಗಿತು. ಇಂದು ಎಚ್ಚೆತ್ತಾಳು, ನಾಳೆ ಎಚ್ಚೆತ್ತಾಳೆಂದು ಕಾದೇಕಾದಿದ್ದು, ಕ್ರಮೇಣ ನಿರರ್ಥಕವನಿಸತೊಡಗಿತು. ದಿನದಿಂದ ದಿನಕ್ಕು ಮೈ ಹಣ್ಣಾಯಿತೇ ಹೊರತು, ಮರಳಿ ಮನಸ್ಸುದಿಸಿ, ಅದನ್ನೆಬ್ಬಿಸುವ ದಿವಸವೇ ಮೂಡಿಬರಲಿಲ್ಲ. ಎಷ್ಟು ಕಾಲವಂತ ಎದುರಿಗೇ ಇದ್ದು, ಮುಂದಾನೊಮ್ಮೆ ಎದ್ದಾಳೆಂದು ಎದುರುನೋಡುವುದು? ಇವೊತ್ತಿಗೂ ತೋಚುತ್ತಿಲ್ಲ. ಸರಿ... ನನ್ನ ಬದುಕು ಕನಕದುರ್ಗೆಯ ಪ್ರಾತಃವಿಧಿಗಳನ್ನು ಪೂರೈಸಿ, ಮೈಶುಚಿಗೊಳಿಸಿ, ಮಡಿಯುಡಿಸುವವರೆಗೆ ಅವಳೊಡನಿರುತ್ತದೆ. ಇನ್ನುಳಿದಂತೆ ಆರ್ಕಿಟೆಕ್ಚರಿನ ಓದು, ಕಲಿಕೆ, ಅಧ್ಯಯನವೆಂದು ಪುಸ್ತಕಗಳ ನಡುವೆ, ಇಂಟರ್ನೆಟ್ಟಿನೊಳಗೆ ಸಂದುಕೊಳ್ಳುತ್ತದೆ. ದಿನಕ್ಕೊಂದೆರಡು ತಾಸು, ಕಾಡು ಹೊಕ್ಕು ಅಂಡಲೆದುಬರುತ್ತೇನೆ. ವಾಕಿಂಗೆಂಬುದು ಅಖಂಡ ಏಕಾಂತವನ್ನು ನೀಗಿಕೊಳ್ಳಲೋಸುಗದ ಪಲಾಯನ ಪದ್ಧತಿಯೆಂದೆನಿಸಿಬಿಟ್ಟಿದೆ. ರಾತ್ರಿ ಮಲಗುವ ಮೊದಲು, ಅವಳು ನಿಶ್ಚಲಸ್ಥ ಮೈಚೆಲ್ಲಿಕೊಂಡಿರುವ ಮಂಚದ ಬದಿನಿಂತು ಕಣ್ಣಾಡಿಸುತ್ತೇನೆ. ದೇವರೇ... ಇವಳನ್ನು ಬೇಗನೇ ಇನ್ನೊಂದು ಜನುಮಕ್ಕೆ ದಾಟಿಸೆಂದು ದಿನದಿನಕ್ಕೂ ಪ್ರಾರ್ಥಿಸುತ್ತೇನೆ. ಕನಕದುರ್ಗೆಯ ಇಹದದಿಬದಿಯನ್ನು ಅವಳ ಸಲುವಾಗಿಯೇ ನೇಮಿಸಲಾಗಿರುವ ಪೆಂಟಮ್ಮನೆಂಬ ನಡುವಯಸ್ಸಿನ ಹೆಂಗಸು ನೋಡಿಕೊಳ್ಳುತ್ತಾಳೆ.

★★★

ಚಿರಾಗನೊಡನೆ ಫೋನ್ಮಾತು ಮುಗಿಸುತ್ತಿರುವಾಗ ಬೆನ್ನಿನಲ್ಲಿ ಯಾರೋ ಮಿಸುಕಿದಂತಾಗಿ, ಹಿಂತಿರುಗಿದರೆ, ಶ್ರವಣ್! ಎಲ್ಲಿದ್ದನೋ ಏನೋ? ಯಾವಾಗ ಬಂದ? ಗುಟ್ಟಾಗಿ ನಿಂತು ಮಾತು ಕೇಳಿಸಿಕೊಂಡನೆ? ಆಶ್ಚರ್ಯವಾಯಿತು.

'ಹೇ... ಎಲ್ಲಿದ್ದೆ? ಯಾವಾಗ ಬಂದೆ?' ಕುತೂಹಲದಿಂದ ಕೇಳಿದೆ.

'ಇಲ್ಲೇ ಇದ್ದೆನಲ್ಲ, ಈಶ್...' ನಕ್ಕ. 'ನೀವು ಫೋನಿನಲ್ಲಿ ಎಷ್ಟು ಬ್ಯುಸಿಯಾಗಿದ್ದಿರಿ ಅಂದರೆ ನಾನು ವಾಪಸು ಬಂದಿದ್ದೇ ನಿಮಗೆ ಗೊತ್ತಾಗಿಲ್ಲ... ಅಷ್ಟು ತನ್ಮಯವಾಗಿ ಮಾತಾಡುತಾ